1319196

M – 2020

Register Number :

Subject Code : **30 (NS)**

# ACCOUNTANCY

(Kannada and English Versions)

Time : 3 Hours 15 Minutes] [Total No. of questions : 35] [Max. Marks : 100

## (Kannada Version)

**ಸೂಚನೆಗಳು :**

1. ವಿಭಾಗ 'ಎ'ನ ಎಲ್ಲಾ ಪ್ರಶ್ನೆಗಳನ್ನು ನಿರಂತರವಾಗಿ ಒಂದೇ ಸ್ಥಳದಲ್ಲಿ ಉತ್ತರಿಸಬೇಕು.
2. ಅಗತ್ಯವಿರುವ ಕಡೆ ಲೆಕ್ಕದ ಟಿಪ್ಪಣಿಗಳನ್ನು ಬರೆಯಿರಿ.
3. ಅಭ್ಯರ್ಥಿಗಳಿಗೆ ಪ್ರಶ್ನೆಗಳನ್ನು ಓದಿಕೊಳ್ಳಲು 15 ನಿಮಿಷ ಅವಧಿಯನ್ನು ಹೆಚ್ಚುವರಿಯಾಗಿ ನೀಡಿದೆ.
4. ಹಾಳೆಯ ಬಲ ಬದಿಯಲ್ಲಿ ನೀಡಿರುವ ಸಂಖ್ಯೆಗಳು ಪೂರ್ಣ ಅಂಕಗಳನ್ನು ತೋರಿಸುತ್ತದೆ.

### ವಿಭಾಗ – ಎ

ಈ ಕೆಳಗಿನವುಗಳಲ್ಲಿ **ಯಾವುದಾದರೂ ಎಂಟು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **1** ಅಂಕಗಳು :

**(8 × 1 = 8)**

1) ನಿಶ್ಚಿತ ಉದ್ದೇಶಗಳಿಗಾಗಿನ ದೇಣಿಗೆಗಳನ್ನು ಯಾವಾಗಲೂ ಬಂಡವಾಳೀಕರಿಸಲಾಗುತ್ತದೆ. ಈ ಹೇಳಿಕೆಯನ್ನು ಸರಿ/ತಪ್ಪು ತಿಳಿಸಿ.

2) ಪಾಲುದಾರರ ಹೊಣೆಗಾರಿಕೆಯು ಸಂಸ್ಥೆಯ ಕಾರ್ಯಗಳಿಗೆ ———————— ಆಗಿರುತ್ತದೆ.

3) A, B ಮತ್ತು Cರವರು ಸಂಸ್ಥೆಯಲ್ಲಿ ಪಾಲುದಾರರಾಗಿರುತ್ತಾರೆ. 'D'ಯನ್ನು ಹೊಸ ಪಾಲುದಾರನೆಂದು ಸೇರಿಸಿಕೊಂಡರೆ

a) ಹಳೆ ಸಂಸ್ಥೆಯು ವಿಸರ್ಜನೆಯಾಗುವುದು.

b) ಹಳೆ ಸಂಸ್ಥೆ ಮತ್ತು ಹಳೆ ಪಾಲುದಾರಿಕೆಯೂ ವಿಸರ್ಜನೆಯಾಗುವುದು.

c) ಹಳೆ ಪಾಲುದಾರಿಕೆ ಪುನರ್‌ರಚನೆಯಾಗುವುದು.

d) ಮೇಲಿನ ಯಾವುದೂ ಅಲ್ಲ

4) X, Y ಮತ್ತು Z ಪಾಲುದಾರರು ಲಾಭವನ್ನು 5 : 3 : 2ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. 'Z' ನಿವೃತ್ತನಾದರೆ X ಮತ್ತು Y ಇವರ ನಡುವಿನ ಹೊಸ ಲಾಭ ಹಂಚಿಕೆಯ ಅನುಪಾತವು ____________ ಆಗಿರುತ್ತದೆ.

5) ಶೇರುಗಳನ್ನು ಯಾವಾಗ ಮುಟ್ಟುಗೋಲು ಹಾಕಲಾಗುತ್ತದೆ?

6) ಸಂಸ್ಥೆಯು ತನ್ನದೇ ಸಾಲಪತ್ರಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಬಹುದೇ?

7) ಚಾಲ್ತಿ ಆಸ್ತಿಗೆ ಒಂದು ಉದಾಹರಣೆ ಕೊಡಿ.

8) ಹಣಕಾಸು ವಿಶ್ಲೇಷಣೆಗೆ ಅತ್ಯಂತ ಸಾಮಾನ್ಯವಾಗಿ ಬಳಸುವ ವಿಧಾನಗಳು

a) ಸಮತಲ ವಿಶ್ಲೇಷಣೆ   b) ಲಂಬಾತ್ಮಕ ವಿಶ್ಲೇಷಣೆ

c) ಅನುಪಾತ ವಿಶ್ಲೇಷಣೆ   d) ಮೇಲಿನ ಎಲ್ಲವುಗಳು

9) EPS ಅನ್ನು ವಿಸ್ತರಿಸಿ.

10) ನಗದು ಹರಿವು ತಃಖ್ತೆ ಎಂದರೇನು?

## ವಿಭಾಗ - ಬಿ

ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **2** ಅಂಕಗಳು :

**(5 × 2 = 10)**

11) ಆಯ-ವ್ಯಯ ಖಾತೆಯ ಯಾವುದಾದರೂ ಎರಡು ಲಕ್ಷಣಗಳನ್ನು ಬರೆಯಿರಿ.

12) ಪಾಲುದಾರರ ಬಂಡವಾಳ ಖಾತೆಗಳನ್ನು ನಿರ್ವಹಿಸಬಹುದಾದ ಎರಡು ವಿಧಾನಗಳನ್ನು ಹೆಸರಿಸಿ.

13) ಪಾಲುದಾರಿಕೆ ಸಂಸ್ಥೆಯಲ್ಲಿ ಹೊಸದಾಗಿ ಸೇರ್ಪಡೆಯಾದ ಪಾಲುದಾರನಿಗೆ ಪ್ರಾಪ್ತಿಯಾಗುವ ಎರಡು ಮುಖ್ಯವಾದ ಹಕ್ಕುಗಳು ಯಾವುವು?

14) ಸಂಸ್ಥೆಯು ವಿಸರ್ಜನೆಯಾದಾಗ ದಾಖಲಿಸದ ಹೊಣೆಗಾರಿಕೆಗಳನ್ನು ಪಾವತಿಸಿದ್ದಕ್ಕೆ ರೋಜು ದಾಖಲೆಯನ್ನು ಬರೆಯಿರಿ.

15) ಶೇರು ಬಂಡವಾಳದ ಯಾವುದಾದರೂ ಎರಡು ವರ್ಗೀಕರಣ (ವಿಧಗಳು)ಗಳನ್ನು ಹೆಸರಿಸಿ.

16) ಹಣಕಾಸಿನ ತಃಖ್ತೆಗಳ ಎರಡು ವಿಧಗಳನ್ನು ತಿಳಿಸಿ.

17) ಹಣಕಾಸು ತಃಖ್ತೆ ವಿಶ್ಲೇಷಣೆಯನ್ನು ಉಪಯೋಗಿಸುವ ಇಬ್ಬರನ್ನು ಹೆಸರಿಸಿ.

18) ಲೆಕ್ಕ ಬರಹ ಶಿಷ್ಠ-3ರ ಪ್ರಕಾರ ವರ್ಗೀಕರಿಸಲಾದ ನಗದು ಹರಿವಿನ ಯಾವುದಾದರೂ ಎರಡು ಚಟುವಟಿಕೆಗಳನ್ನು ಹೆಸರಿಸಿ.

## ವಿಭಾಗ - ಸಿ

ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **6** ಅಂಕಗಳು : **(4 × 6 = 24)**

19) ರಾಧಾ ಮತ್ತು ರಮಣ ಸಂಸ್ಥೆಯ ಪಾಲುದಾರರಾಗಿದ್ದು, 2018-19ನೇ ವರ್ಷಕ್ಕೆ ರಾಧಾಳು ತನ್ನ ಸ್ವಂತಕ್ಕೆ ಈ ಕೆಳಗಿನ ಹಣವನ್ನು ಬಳಸಿದ್ದಾಳೆ.

ದಿನಾಂಕ 01.04.2018ರಂದು ₹ 5,000

ದಿನಾಂಕ 30.06.2018ರಂದು ₹ 8,000

ದಿನಾಂಕ 01.12.2018ರಂದು ₹ 3,000

ದಿನಾಂಕ 31.03.2019ರಂದು ₹ 2,000

31.03.2019ಕ್ಕೆ ಕೊನೆಗೊಳ್ಳುವ ವರ್ಷಕ್ಕೆ ಶೇಕಡಾ 10ರಂತೆ ರಾಧಾಳ ಸ್ವಂತ ವೆಚ್ಚದ ಮೇಲೆ ಗುಣಲಬ್ಧ ಪದ್ಧತಿಯ ಪ್ರಕಾರ ಬಡ್ಡಿಯನ್ನು ಕಂಡು ಹಿಡಿಯಿರಿ.

20) ರಾಶಿ, ರಕ್ಷಾ ಮತ್ತು ರಾಹುಲ್ ಪಾಲುದಾರರು ಲಾಭವನ್ನು 4 : 3 : 2ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. ರಾಶಿ ನಿವೃತ್ತಳಾಗುತ್ತಾಳೆ. ರಕ್ಷಾ ಮತ್ತು ರಾಹುಲ್ ಭವಿಷ್ಯದಲ್ಲಿ ಲಾಭವನ್ನು 5 : 3ರ ಅನುಪಾತದಲ್ಲಿ ಹಂಚಿಕೊಳ್ಳಲು ನಿರ್ಧರಿಸುತ್ತಾರೆ. ರಕ್ಷಾ ಮತ್ತು ರಾಹುಲ್‌ರವರ ಗಳಿಕೆ ಅನುಪಾತವನ್ನು ಕಂಡು ಹಿಡಿಯಿರಿ.

21) ಅರುಣ, ವರುಣ ಮತ್ತು ತರುಣ ಎಂಬ ಪಾಲುಗಾರರು ಲಾಭ ಮತ್ತು ನಷ್ಟವನ್ನು ಸಮವಾಗಿ ಹಂಚಿಕೊಳ್ಳುತ್ತಿದ್ದರು. ದಿನಾಂಕ 31.03.2019ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ :

ದಿನಾಂಕ 31.03.2019ರ ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | ₹ | ಆಸ್ತಿಗಳು | ₹ |
|---|---|---|---|
| ಸಾಹುಕಾರರು | 19,000 | ಸ್ಥಿರಾಸ್ತಿಗಳು | 53,000 |
| ಸಾಮಾನ್ಯ ನಿಧಿ | 6,000 | ದಾಸ್ತಾನು | 18,000 |

| ಹೊಣೆಗಾರಿಕೆಗಳು | | ₹ | ಆಸ್ತಿಗಳು | ₹ |
|---|---|---|---|---|
| ಬಂಡವಾಳಗಳು : | | | ಸಾಲಗಾರರು | 15,000 |
| ಅರುಣ | 25,000 | | ನಗದು | 14,000 |
| ವರುಣ | 25,000 | | | |
| ತರುಣ | 25,000 | 75,000 | | |
| | | 1,00,000 | | 1,00,000 |

ದಿನಾಂಕ 01.08.2019ರಂದು ಅರುಣ ನಿಧನ ಹೊಂದಿದರು. ಅವರ ವಾರಸುದಾರರು ಈ ಕೆಳಗಿನವುಗಳನ್ನು ಪಡೆಯಬಹುದು.

a) ಬಂಡವಾಳ

b) ಸಾಮಾನ್ಯ ನಿಧಿ ಭಾಗ

c) ದಲ್ಲಾಳಿ ಭಾಗ. ವಾರ್ಷಿಕ ದಲ್ಲಾಳಿ ₹ 7,200

d) ಕೀರ್ತಿ ಮೌಲ್ಯದ ಭಾಗ. ಸಂಸ್ಥೆಯ ಕೀರ್ತಿ ಮೌಲ್ಯ ₹ 18,000

e) ನಿಧನ ಹೊಂದಿದ ದಿನಾಂಕದವರೆಗಿನ ಅಮಾನತು ಲಾಭಾಂಶ – ಆತನ ಭಾಗ ₹ 12,000

ಅರುಣರ ಬಂಡವಾಳ ಖಾತೆಯನ್ನು ತೆರೆಯಿರಿ.

22) ಹಿಂದೂಸ್ತಾನ್ ಕಂಪನಿ ನಿಯಮಿತ ಇವರು ₹ 10 ಮುಖಬೆಲೆಯ, 20,000, 10% ಸಾಲಪತ್ರಗಳನ್ನು ಬಿಡುಗಡೆ ಮಾಡಿದ್ದಾರೆ. ಸದರಿ ಹಣವನ್ನು ಈ ಕೆಳಕಂಡಂತೆ ಪಾವತಿಸಲು ಸೂಚಿಸಿದೆ.

₹ 2 ಅರ್ಜಿ ಹಣ

₹ 4 ಹಂಚಿಕೆ ಹಣ

₹ 4 ಪ್ರಥಮ ಹಾಗೂ ಅಂತಿಮ ಕರೆ ಹಣ.

ಎಲ್ಲಾ ಸಾಲಪತ್ರಗಳು ವಂತಿಕೆಯಾಗಿ ಹಾಗೂ ಹಣ ಅಧಿಕೃತವಾಗಿ ಸ್ವೀಕರಿಸಲಾಗಿದೆ.

ಅವಶ್ಯಕ ರೋಜು ದಾಖಲೆಗಳನ್ನು ಕಂಪನಿ ಪುಸ್ತಕದಲ್ಲಿ ದಾಖಲಿಸಿ.

23) ಈ ಕೆಳಗಿನ ವಿವರಣೆಗಳಿಂದ ಪರಿಷ್ಕೃತ ಪರಿಚ್ಛೇದ–IIIರಂತೆ, ಕಂಪನಿ ಕಾಯಿದೆ 2013ರ ಪ್ರಕಾರ 31.03.2019ರ ವರ್ಷಕ್ಕೆ ಕೊನೆಗೊಂಡಂತೆ ಲಾಭ–ನಷ್ಟ ತಃಖ್ತೆಯನ್ನು ತಯಾರಿಸಿ.

| ವಿವರಗಳು | ₹ |
|---|---|
| ಕಾರ್ಯಾಚರಣೆಗಳಿಂದ ಬಂದ ಆದಾಯ | 8,00,000 |
| ಇತರೆ ಆದಾಯ | 50,000 |
| ಬಳಸಿದ ಸಾಮಗ್ರಿಗಳ ವೆಚ್ಚ | 2,00,000 |
| ಉದ್ಯೋಗಿ ಉಪಯುಕ್ತತೆಯ ಖರ್ಚು | 1,00,000 |
| ಸವಕಳಿ ಮತ್ತು ಅಗೋಚರ ಆಸ್ತಿಯ ಮೌಲ್ಯ ಕಡಿಮೆಗೊಳಿಸುವಿಕೆ | 50,000 |
| ತೆರಿಗೆ | 30% |

24) ಈ ಕೆಳಗಿನ ಮಾಹಿತಿಗಳಿಂದ ಚಾಲ್ತಿ ಅನುಪಾತ ಮತ್ತು ತ್ವರಿತ ಅನುಪಾತಗಳನ್ನು ಕಂಡು ಹಿಡಿಯಿರಿ :

| ವಿವರಗಳು | ₹ |
|---|---|
| ದಾಸ್ತಾನು | 50,000 |
| ವ್ಯಾಪಾರಿ ಬರತಕ್ಕವುಗಳು | 50,000 |
| ಮುಂಗಡ ತೆರಿಗೆ | 4,000 |
| ನಗದು ಮತ್ತು ನಗದು ಸಮಾನಕಗಳು | 30,000 |
| ವ್ಯಾಪಾರಿ ಕೊಡತಕ್ಕವುಗಳು | 1,00,000 |
| ಅಲ್ಪಾವಧಿ ಸಾಲ (ಬ್ಯಾಂಕ್ ಮೀರೆಳೆತ) | 4,000 |

25) ಈ ಕೆಳಗಿನ ಮಾಹಿತಿಗಳಿಂದ, ಹಣ ಒದಗಿಸುವಿಕೆ ಚಟುವಟಿಕೆಗಳಿಂದಾದ ನಗದು ಹರಿವನ್ನು ಕಂಡು ಹಿಡಿಯಿರಿ :

| ವಿವರ | 31.03.2018 | 31.03.2019 |
|---|---|---|
| ಶೇರು ಬಂಡವಾಳ | 10,00,000 | 15,00,000 |
| ಸಾಲಪತ್ರಗಳು | 2,00,000 | – |
| ಬ್ಯಾಂಕ್ ಸಾಲ | – | 1,00,000 |

a) ವರ್ಷಾವಧಿಯಲ್ಲಿನ ಉದ್ದೇಶಿತ ಮತ್ತು ಪಾವತಿಸಿದ ಲಾಭಾಂಶ ₹ 1,50,000

b) ಲಾಭಾಂಶ ತೆರಿಗೆ ಪಾವತಿಸಿದ್ದು ₹ 15,000

## ವಿಭಾಗ - ಡಿ

**ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 12 ಅಂಕಗಳು :** **(4 × 12 = 48)**

26) ಯುನಿಟಿ ಕ್ಲಬ್‌ನ ಅಢಾವೆ ಪತ್ರಿಕೆ ಹಾಗೂ ಸ್ವೀಕೃತಿ ಮತ್ತು ಪಾವತಿ ಖಾತೆಯಿಂದ, 31 ಮಾರ್ಚ್, 2019ಕ್ಕೆ ವರ್ಷಾಂತ್ಯವಾಗುವ ಆದಾಯ-ವೆಚ್ಚ ಖಾತೆ ಮತ್ತು ಅಢಾವೆ ಪತ್ರಿಕೆಯನ್ನು ತಯಾರಿಸಿ.

ದಿನಾಂಕ 31.03.2018ಕ್ಕೆ ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | ₹ | ಆಸ್ತಿಗಳು | ₹ |
|---|---|---|---|
| ಬಾಡಿಗೆ ಬಾಕಿ | 100 | ಕೈಯಲ್ಲಿ ನಗದು | 2,200 |
| ಬಂಡವಾಳ ನಿಧಿ | 27,600 | ಕಟ್ಟಡ | 20,000 |
| | | ಬಾಕಿ ವಂತಿಗೆ | 500 |
| | | ಪೀಠೋಪಕರಣ | 3,000 |
| | | ಪುಸ್ತಕಗಳು | 2,000 |
| | 27,700 | | 27,700 |

31.03.2019ಕ್ಕೆ ಅಂತ್ಯವಾಗುವ ಸ್ವೀಕೃತಿ ಮತ್ತು ಪಾವತಿ ಖಾತೆ

ಖರ್ಚು ಜಮಾ

| ಸ್ವೀಕೃತಿಗಳು | ₹ | ಪಾವತಿಗಳು | ₹ |
|---|---|---|---|
| ಗೆ ಹಿಂದಿನಿಂದ ಬಂದ ಶಿಲ್ಕು | 2,200 | ಯಿಂದ ಬಾಡಿಗೆ | 6,600 |
| ಗೆ ವಂತಿಗೆಗಳು | 32,500 | ಯಿಂದ ಉಪನ್ಯಾಸಕರ ಶುಲ್ಕ | 3,900 |
| ಗೆ ಅಜೀವ ಸದಸ್ಯತ್ವ ಶುಲ್ಕ | 3,250 | ಯಿಂದ ಮುದ್ರಣ ಮತ್ತು ಲೇಖನ ಸಾಮಗ್ರಿ | 2,500 |
| ಗೆ ದೇಣಿಗೆ | 2,500 | ಯಿಂದ ಪುಸ್ತಕಗಳು (31.03.2019) | 8,400 |
| ಗೆ ಮನರಂಜನೆಯಿಂದ ಲಾಭ | 7,250 | ಯಿಂದ ಪೀಠೋಪಕರಣ ಖರೀದಿ (01.10.2018) | 9,900 |
| ಗೆ ಬಡ್ಡಿ | 1,100 | ಯಿಂದ ಮುಂದುವರಿದ ಶಿಲ್ಕು | 17,500 |
| | 48,800 | | 48,800 |

ಹೆಚ್ಚುವರಿ ಮಾಹಿತಿ :

a) 31.03.2019ಕ್ಕೆ ವಂತಿಗೆ ಬಾಕಿ ₹ 750

b) 31.03.2019ಕ್ಕೆ ಬಾಡಿಗೆ ಬಾಕಿ ₹ 500

c) ದೇಣಿಗೆಯನ್ನು ಬಂಡವಾಳೀಕರಿಸಿದೆ.

d) ಪೀಠೋಪಕರಣಗಳ ಮೇಲೆ ವಾರ್ಷಿಕ 10% ಸವಕಳಿ ತೆಗೆಯಿರಿ (ಖರೀದಿ ಒಳಗೊಂಡಂತೆ)

e) ಪುಸ್ತಕಗಳ ಮೇಲೆ ವಾರ್ಷಿಕ 10% ಸವಕಳಿ ತೆಗೆಯಿರಿ.

27) ಶೀತಲ್ ಮತ್ತು ಶರತ್ ಇವರು ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು ಲಾಭವನ್ನು 3/4 ಮತ್ತು 1/4ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿರುವರು. ದಿನಾಂಕ 31.03.2019ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ :

ದಿನಾಂಕ 31.03.2019ರಂದು ಇರುವ ಶೀತಲ್ ಮತ್ತು ಶರತ್‌ರವರ ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | ₹ | ಆಸ್ತಿಗಳು | ₹ |
|---|---|---|---|
| ಸಾಹುಕಾರರು | 46,000 | ಬ್ಯಾಂಕಿನಲ್ಲಿ ನಗದು | 30,000 |
| ಮೀಸಲು ನಿಧಿ | 4,000 | ಬರತಕ್ಕ ಹುಂಡಿಗಳು | 4,000 |
| ಬಂಡವಾಳ ಖಾತೆಗಳು : | | ಸಾಲಗಾರರು | 16,000 |
| ಶೀತಲ್ | 30,000 | ದಾಸ್ತಾನು | 20,000 |
| ಶರತ್ | 16,000 | ಪೀಠೋಪಕರಣ | 1,000 |
| | | ಭೂಮಿ ಮತ್ತು ಕಟ್ಟಡ | 25,000 |
| | 96,000 | | 96,000 |

ದಿನಾಂಕ 01.04.2019ರಂದು, ರೇಣು ಇವರಿಗೆ ಈ ಕೆಳಗಿನ ಕರಾರುಗಳ ಮೇಲೆ ಪಾಲುಗಾರಿಕೆಗೆ ಪ್ರವೇಶ ನೀಡಲಾಯಿತು :

a) ರೇಣು 1/5ರ ಭಾಗ ಲಾಭಕ್ಕೆ, ಬಂಡವಾಳಕ್ಕಾಗಿ ₹ 15,000 ಮತ್ತು ಕೀರ್ತಿಮೌಲ್ಯಕ್ಕಾಗಿ ₹ 8,000 ನಗದು ತರಬೇಕು.

b) ಕೀರ್ತಿಮೌಲ್ಯದ ಅರ್ಧ ಮೊತ್ತವನ್ನು ಶೀತಲ್ ಮತ್ತು ಶರತ್ ಹಿಂಪಡೆಯುವರು.

c) ದಾಸ್ತಾನನ್ನು ಶೇಕಡಾ 10ರಷ್ಟು ಕಡಿಮೆಗೊಳಿಸಿರಿ.

d) ಸಾಲಗಾರರ ಮೇಲೆ ಶೇಕಡಾ 5ರಷ್ಟು ಸಂಶಯಾಸ್ಪದ ಸಾಲಕ್ಕಾಗಿ ಕಾಯ್ದಿರಿಸಿ.

e) ಭೂಮಿ ಮತ್ತು ಕಟ್ಟಡದ ಮೌಲ್ಯವನ್ನು ಶೇಕಡಾ 20ರಷ್ಟು ಅಧಿಕಗೊಳಿಸಿರಿ.

f) ಸಾಹುಕಾರರ ಮೊತ್ತದಲ್ಲಿ ಕೂಡಿದ ₹ 1,800ರ ಬಾಬ್ತನ್ನು ಪಡೆದುಕೊಳ್ಳುವ ಸಂಭವ ಇರುವುದಿಲ್ಲ. ಆದ್ದರಿಂದ ಅದನ್ನು ತೆಗೆದು ಹಾಕಿರಿ.

ತಯಾರಿಸಿರಿ :

i) ಪುನರ್‌ಮೌಲ್ಯ ಖಾತೆ

ii) ಪಾಲುದಾರರ ಬಂಡವಾಳ ಖಾತೆಗಳು

iii) ಹೊಸ ಸಂಸ್ಥೆಯ ಅಢಾವೆ ಪತ್ರಿಕೆ

28) ಅನೂಪ್ ಮತ್ತು ಸುಮಿತ್ ಒಂದು ಪಾಲುದಾರಿಕೆ ಸಂಸ್ಥೆಯಲ್ಲಿ ಸಮ ಪಾಲುದಾರರಾಗಿದ್ದರು. ಅವರು ಮಾರ್ಚ್ 31, 2019ರಂದು ಪಾಲುದಾರಿಕೆಯನ್ನು ವಿಸರ್ಜಿಸಲು ನಿರ್ಧರಿಸಿದರು. ಅಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ :

ಮಾರ್ಚ್ 31, 2019ರಂದು ಇದ್ದಂತೆ ಅನೂಪ್ ಮತ್ತು ಸುಮಿತ್‌ರವರ ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | | ₹ | ಆಸ್ತಿಗಳು | ₹ |
|---|---|---|---|---|
| ಸಾಹುಕಾರರು | | 30,000 | ಬ್ಯಾಂಕಿನಲ್ಲಿ ನಗದು | 14,000 |
| ಸಾಲ | | 40,000 | ಸಾಲಗಾರರು | 12,000 |
| ಮೀಸಲು ನಿಧಿ | | 10,000 | ಯಂತ್ರೋಪಕರಣ | 47,000 |
| ಬಂಡವಾಳಗಳು : | | | ದಾಸ್ತಾನು | 42,000 |
| ಅನೂಪ್ | 60,000 | | ಭೂಮಿ ಮತ್ತು ಕಟ್ಟಡ | 60,000 |
| ಸುಮಿತ್ | 60,000 | 1,20,000 | ಪೀಠೋಪಕರಣ | 25,000 |
| | | 2,00,000 | | 2,00,000 |

ಆಸ್ತಿಗಳನ್ನು ಈ ಕೆಳಗಿನಂತೆ ವಿಲೇವಾರಿ ಮಾಡಿದೆ.

| | |
|---|---|
| ಭೂಮಿ ಮತ್ತು ಕಟ್ಟಡ | ₹ 72,000 |
| ಪೀಠೋಪಕರಣ | ₹ 22,500 |
| ದಾಸ್ತಾನು | ₹ 40,500 |
| ಯಂತ್ರೋಪಕರಣ | ₹ 48,000 |
| ಸಾಲಗಾರರು | ₹ 10,500 |

ಸಾಹುಕಾರರಿಗೆ ₹ 25,500 ಪಾವತಿಸಿ ಪೂರ್ತಿ ಇತ್ಯರ್ಥ ಪಡಿಸಲಾಯಿತು. ವಿಲೇವಾರಿ ಖರ್ಚುಗಳು ₹ 2,500 ತಯಾರಿಸಿ :

a) ವಿಲೇವಾರಿ ಖಾತೆ

b) ಪಾಲುದಾರರ ಬಂಡವಾಳ ಖಾತೆಗಳು

c) ಬ್ಯಾಂಕು ಖಾತೆ.

29) ಅರುಷಿ ಕಂಪ್ಯೂಟರ್ಸ್ ನಿಯಮಿತರವರು, ₹ 100ರ ಮುಖಬೆಲೆಯ 10,000 ಇಕ್ವಿಟಿ ಶೇರುಗಳನ್ನು ಪ್ರತಿ ಶೇರಿಗೆ ₹ 10ರಂತೆ ಪ್ರೀಮಿಯಂಗೆ ಬಿಡುಗಡೆ ಮಾಡಿದ್ದಾರೆ. ಸದರಿ ಹಣವನ್ನು ಈ ಕೆಳಕಂಡಂತೆ ಪಾವತಿಸಲು ಸೂಚಿಸಿದೆ.

₹ 30 ಅರ್ಜಿ ಹಣ

₹ 50 ಹಂಚಿಕೆ ಹಣ (ಪ್ರೀಮಿಯಂ ಸೇರಿ)

₹ 30 ಪ್ರಥಮ ಮತ್ತು ಅಂತಿಮ ಕರೆ ಹಣ

ಎಲ್ಲಾ ಶೇರುಗಳಿಗೆ ವಂತಿಗೆಯನ್ನು ಪಡೆದುಕೊಳ್ಳಲಾಗಿದೆ. ಆದರೆ 500 ಶೇರುಗಳ ಮೇಲಿನ ಪ್ರಥಮ ಮತ್ತು ಅಂತಿಮ ಕರೆ ಹಣ ಸಂದಾಯವಾಗಿರುವುದಿಲ್ಲ. ನಿರ್ದೇಶಕರು ಈ ಶೇರುಗಳನ್ನು ಮುಟ್ಟುಗೋಲು ಹಾಕಿ, ಪ್ರತಿಯೊಂದಕ್ಕೆ ₹ 80ರಂತೆ ಪೂರ್ಣ ಪಾವತಿಯಾದ ಶೇರುಗಳೆಂದು ಮರು ಬಿಡುಗಡೆ ಮಾಡಿರುತ್ತಾರೆ.

ಕಂಪನಿ ಪುಸ್ತಕದಲ್ಲಿ ಅಗತ್ಯವಿರುವ ರೋಜು ದಾಖಲೆಗಳನ್ನು ಬರೆಯಿರಿ.

30) ಆಲ್ಫಾ ಕಂಪನಿ ನಿಯಮಿತ ಪುಸ್ತಕದಲ್ಲಿ, ಕೆಳಗಿನ ಸಂದರ್ಭಗಳಲ್ಲಿ ಸಾಲಪತ್ರಗಳ ನೀಡಿಕೆಗೆ ಸಂಬಂಧಿಸಿದ ರೋಜು ದಾಖಲೆಗಳನ್ನು ದಾಖಲಿಸಿ.

a) ತಲಾ ₹ 100ರ ಮುಖಬೆಲೆಯಲ್ಲಿ ಶೇಕಡಾ 12ರ ದರದ 10,000 ಸಾಲಪತ್ರಗಳನ್ನು ನೀಡಿದೆ, ಆದರೆ ಶೇಕಡಾ 5ರ ಪ್ರೀಮಿಯಂ ಬೆಲೆಯಲ್ಲಿ ವಿಮೋಚನೆಗೊಳಿಸುತ್ತಿದೆ.

b) ತಲಾ ₹ 100ರಂತೆ ಶೇಕಡಾ 12ರ ದರದ 10,000 ಸಾಲಪತ್ರಗಳನ್ನು ಶೇಕಡಾ 10ರ ಸೋಡಿ ಬೆಲೆಯಲ್ಲಿ ನೀಡಿದೆ, ಆದರೆ ಮುಖಬೆಲೆಯಲ್ಲಿ ವಿಮೋಚನೆಗೊಳಿಸುತ್ತಿದೆ.

c) ತಲಾ ₹ 100ರಂತೆ ಶೇಕಡಾ 12ರ ದರದ 10,000 ಸಾಲಪತ್ರಗಳನ್ನು ಶೇಕಡಾ 5ರಂತೆ ಪ್ರೀಮಿಯಂ ಬೆಲೆಯಲ್ಲಿ ನೀಡಿದೆ, ಆದರೆ ಮುಖಬೆಲೆಯಲ್ಲಿ ವಿಮೋಚನೆಗೊಳಿಸುತ್ತಿದೆ.

d) ತಲಾ ₹ 100ರ ಮುಖಬೆಲೆಯಲ್ಲಿ ಶೇಕಡಾ 12ರ ದರದ 10,000 ಸಾಲಪತ್ರಗಳನ್ನು ನೀಡಿದೆ, ಮತ್ತು ಮುಖಬೆಲೆಯಲ್ಲಿ ವಿಮೋಚನೆಗೊಳಿಸುತ್ತಿದೆ.

31) ಈ ಕೆಳಗಿನ ಮಾಹಿತಿಗಳಿಂದ ಆದೀಪ ಕಂಪನಿ ನಿಯಮಿತರವರ ತುಲನಾತ್ಮಕ ಆಢಾವೆ ಪತ್ರಿಕೆಯನ್ನು ತಯಾರಿಸಿರಿ.

| ವಿವರಗಳು | 31.3.2018<br>₹ | 31.3.2019<br>₹ |
|---|---|---|
| I. ಇಕ್ವಿಟಿ ಮತ್ತು ಹೊಣೆಗಾರಿಕೆಗಳು : | | |
| ಇಕ್ವಿಟಿ ಶೇರು ಬಂಡವಾಳ | 5,00,000 | 8,00,000 |
| ಮೀಸಲು ಮತ್ತು ಉಳಿಕೆ ಲಾಭ | 1,50,000 | 2,50,000 |
| ದೀರ್ಘಾವಧಿ ಸಾಲಗಳು | 2,00,000 | 1,50,000 |
| ವ್ಯಾಪಾರಿ ಕೊಡತಕ್ಕವುಗಳು | 1,00,000 | 2,00,000 |
| ಇತರೆ ಚಾಲ್ತಿ ಹೊಣೆಗಾರಿಕೆಗಳು | 50,000 | 1,00,000 |
| ಒಟ್ಟು | 10,00,000 | 15,00,000 |

| ವಿವರಗಳು | 31.3.2018 | 31.3.2019 |
|---|---|---|
| | ₹ | ₹ |
| II. ಆಸ್ತಿಗಳು | | |
| ಸ್ಥಿರಾಸ್ತಿಗಳು | 3,00,000 | 5,00,000 |
| ಚಾಲ್ತಿಯೇತರ ಹೂಡಿಕೆಗಳು | 1,50,000 | 2,00,000 |
| ದಾಸ್ತಾನು | 2,50,000 | 3,50,000 |
| ವ್ಯಾಪಾರಿ ಬರತಕ್ಕವುಗಳು | 2,00,000 | 2,50,000 |
| ಬ್ಯಾಂಕಿನಲ್ಲಿರುವ ನಗದು | 1,00,000 | 2,00,000 |
| ಒಟ್ಟು | 10,00,000 | 15,00,000 |

32) ಈ ಕೆಳಗಿನ ಮಾಹಿತಿಗಳಿಂದ, ಕೆಳಗಿನವುಗಳನ್ನು ಕಂಡು ಹಿಡಿಯಿರಿ.

a) ನಿವ್ವಳ ಆಸ್ತಿ ಆವರ್ತನ ಅನುಪಾತ

b) ಸ್ಥಿರಾಸ್ತಿ ಆವರ್ತನ ಅನುಪಾತ

c) ದುಡಿಯುವ ಬಂಡವಾಳ ಆವರ್ತನ ಅನುಪಾತ

d) ಸ್ಥೂಲ ಲಾಭ ಅನುಪಾತ

e) ನಿವ್ವಳ ಲಾಭ ಅನುಪಾತ

f) ಕಾರ್ಯಾಚರಣೆ ಅನುಪಾತ

| ವಿವರಗಳು | ₹ |
|---|---|
| ಸ್ಥಿರಾಸ್ತಿಗಳು | 16,00,000 |
| ಚಾಲ್ತಿ ಆಸ್ತಿಗಳು | 4,00,000 |
| ಚಾಲ್ತಿ ಹೊಣೆಗಾರಿಕೆಗಳು | 2,00,000 |
| ಕಾರ್ಯಾಚರಣೆಗಳಿಂದ ಬಂದ ಆದಾಯ | 20,00,000 |
| ಕಾರ್ಯಾಚರಣೆ ಕಂದಾಯದ ವೆಚ್ಚ | 8,00,000 |
| ನಿವ್ವಳ ಲಾಭ | 4,00,000 |
| ಕಾರ್ಯಾಚರಣೆ ವೆಚ್ಚ | 1,00,000 |

## ವಿಭಾಗ - ಇ

(ಪ್ರಾಯೋಗಿಕ ಆಧಾರಿತ ಪ್ರಶ್ನೆಗಳು)

ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **5** ಅಂಕಗಳು : **(2 × 5 = 10)**

33) ಈ ಕೆಳಗಿನ ಅಂಶಗಳನ್ನು ಬಂಡವಾಳ ಮತ್ತು ಕಂದಾಯವಾಗಿ ವಿಂಗಡಿಸಿ.

a) ಮೃತ್ಯುದತ್ತಿ

b) ಗಣಕಯಂತ್ರದ ಖರೀದಿ

c) ವಂತಿಕೆ

d) ಗೌರವ ಸನ್ಮಾನ

e) ಸಾದಿಲ್ವಾರು ಖರೀದಿ

34) ಕಾಲ್ಪನಿಕ ಅಂಕಿ ಅಂಶಗಳ ಸಹಾಯದಿಂದ ಎರಡು ಸಮ ವಾರ್ಷಿಕ ಕಂತುಗಳ ಮೂಲಕ ಬಡ್ಡಿ ಸೇರಿಸಿಕೊಂಡು ಮರು ಪಾವತಿ ತೋರಿಸುವ ವಾರಸುದಾರರ ಸಾಲದ ಖಾತೆಯನ್ನು ತಯಾರಿಸಿ.

35) ನೇರ ವಿಧಾನ ಬಳಸಿ, ಕಾರ್ಯಾತ್ಮಕ ಚಟುವಟಿಕೆಗಳಿಂದಾದ ನಗದು ಹರಿವುಗಳ ಮಾದರಿಯನ್ನು ಬರೆಯಿರಿ.

## (English Version)

***Instructions :*** *1. All the sub questions of Section – A should be answered continuously at one place.*

*2. Provide working notes wherever necessary.*

*3. 15 minutes extra has been allotted for candidates to read the questions.*

*4. Figures in the right hand margin indicate full marks.*

## SECTION – A

Answer **any eight** questions. Each question carries **1** mark : **(8 × 1 = 8)**

1) Donations for specific purposes are always capitalized. State True/False.

2) The liability of a partner for acts of the firm is ————.

3) A, B and C are partners in a firm. If 'D' is admitted as a new partner
   a) old firm is dissolved
   b) old firm and old partnership is dissolved
   c) old partnership is re-constituted
   d) None of the above

4) X, Y and Z are partners sharing profits in the ratio of 5 : 3 : 2. If 'Z' retires, the new profit sharing ratio between X and Y will be ————.

5) When can shares be forfeited?

6) Can the company purchase its own debentures in open market.

7) Give an example for current asset.

8) The most commonly used tools for financial analysis are :
   a) Horizontal analysis b) Vertical analysis
   c) Ratio analysis d) All the above

9) Expand EPS.

10) What is cash flow statement?

## SECTION – B

Answer **any five** questions. Each question carries **2** marks : **(5 × 2 = 10)**

11) Write any two features of receipts and payments account.

12) State the two methods by which the capital accounts of partners are maintained.

13) What are the two main rights acquired by a newly admitted partner in the partnership firm?

14) Write the journal entry for the payment of unrecorded liabilities on the dissolution of a firm.

15) Name any two categories of share capital.

16) Mention two types of financial statements.

17) Name any two users of financial statement analysis.

18) Mention any two cash flow activities classified as per AS-3.

## SECTION – C

Answer **any four** questions. Each question carries **6** marks : **(4 × 6 = 24)**

19) Radha and Raman are partners in a firm. Radha's drawings for the year 2018-19 are given as under :

₹ 5,000 on 01.04.2018

₹ 8,000 on 30.06.2018

₹ 3,000 on 01.12.2018

₹ 2,000 on 31.03.2019

Calculate interest on Radha's drawings at 10% p.a. for the year ending 31.03.2019 under product method.

20) Rashi, Raksha and Rahul are partners sharing profits in the ratio of 4 : 3 : 2. Rashi retires. Raksha and Rahul decided to share profits in future in the ratio of 5 : 3. Calculate the gaining ratio of Raksha and Rahul.

21) Arun, Varun and Tarun are partners sharing profits and losses equally. Their Balance sheet as on 31.03.2019 was as follows :

Balance sheet as on 31.03.2019

| Liabilities | | ₹ | Assets | ₹ |
|---|---|---|---|---|
| Creditors | | 19,000 | Fixed assets | 53,000 |
| General reserve | | 6,000 | Stock | 18,000 |
| Capitals : | | | Debtors | 15,000 |
| Arun | 25,000 | | Cash in hand | 14,000 |
| Varun | 25,000 | | | |
| Tarun | 25,000 | 75,000 | | |
| | | 1,00,000 | | 1,00,000 |

Arun died on 01.08.2019. His executors claims the following.

a) Capital

b) Share of General reserve

c) Share of commission. Annual commission ₹ 7,200

d) Share of Goodwill. Goodwill of the firm ₹ 18,000

e) Share of profit upto the date of death-his share ₹ 12,000

Prepare Arun's Capital Account.

22) Hindusthan Co., Ltd., issued 20,000, 10% debentures of ₹10 each payable as follows :

₹ 2 on application

₹ 4 on allotment

₹ 4 on first and final call.

All the debentures were subscribed and the money duly received.

Pass the necessary journal entries in the books of the company.

23) From the following information, prepare statement of profit and loss for the year ended 31.03.2019 as per schedule – III of the Companies Act, 2013.

| Particulars | ₹ |
|---|---|
| Revenue from operations | 8,00,000 |
| Other Income | 50,000 |
| Cost of materials consumed | 2,00,000 |
| Employee benefit expenses | 1,00,000 |
| Depreciation and Amortization | 50,000 |
| Tax | 30% |

24) Calculate Current ratio and Quick ratio from the following Information :

| Particulars | ₹ |
|---|---|
| Inventories | 50,000 |
| Trade receivables | 50,000 |
| Advance tax | 4,000 |
| Cash and Cash equivalents | 30,000 |
| Trade payables | 1,00,000 |
| Short term borrowings (bank overdraft) | 4,000 |

25) From the following information, calculate the cash flows from financing activities.

| Particulars | 31.03.2018 | 31.03.2019 |
|---|---|---|
| Share capital | 10,00,000 | 15,00,000 |
| Debentures | 2,00,000 | – |
| Bank Loan | – | 1,00,000 |

a) Dividend proposed and paid during the year ₹ 1,50,000

b) Dividend tax paid ₹ 15,000

## SECTION – D

Answer **any four** questions. Each question carries **12** marks : **(4 × 12 = 48)**

26) From the following Balance Sheet and Receipt and Payment account of Unity Club, Prepare Income and Expenditure account for the year ended 31.03.2019 and the Balance sheet as on that date.

Balance Sheet as on 31.03.2018

| Liabilities | ₹ | Assets | ₹ |
|---|---|---|---|
| Outstanding Rent | 100 | Cash in hand | 2,200 |
| Capital fund | 27,600 | Building | 20,000 |
| | | Outstanding subscription | 500 |
| | | Furniture | 3,000 |
| | | Books | 2,000 |
| | 27,700 | | 27,700 |

Receipt and payment a/c for the year ended 31.03.2019

Dr. Cr.

| Receipts | ₹ | Payments | ₹ |
|---|---|---|---|
| To Balance b/d | 2,200 | By Rent | 6,600 |
| To Subscriptions | 32,500 | By Lecturer's fee | 3,900 |
| To Life Membership fee | 3,250 | By Printing and Stationery | 2,500 |
| To Donation | 2,500 | By Books (31.03.2019) | 8,400 |
| To Profit from entertainment | 7,250 | By Furniture (01.10.2018) | 9,900 |
| To Interest | 1,100 | By Balance c/d | 17,500 |
| | 48,800 | | 48,800 |

Additional Information :

a) Subscription outstanding on 31.03.2019 ₹ 750

b) Rent outstanding on 31.03.2019 ₹ 500

c) Donation to be capitalized.

d) Depreciate furniture at 10% p.a. (including purchase)

e) Depreciate books at 10% p.a.

27) Sheetal and Sharath were partners in a firm sharing profits in the proportions of 3/4th and 1/4th. Their Balance sheet on 31.03.2019 was as follows :

Balance Sheet of Sheetal and Sharath as on 31.03.2019

| Liabilities | ₹ | Assets | ₹ |
|---|---|---|---|
| Creditors | 46,000 | Cash at bank | 30,000 |
| Reserve fund | 4,000 | Bills receivables | 4,000 |
| Capital a/c's : | | Debtors | 16,000 |
| Sheetal | 30,000 | Stock | 20,000 |
| Sharath | 16,000 | Furniture | 1,000 |
| | | Land and Building | 25,000 |
| | 96,000 | | 96,000 |

On 01.04.2019 Renu was admitted into partnership on the following terms :

a) Renu pays ₹ 15,000 as her capital for 1/5th share and ₹ 8,000 for goodwill.

b) Half of the goodwill is to be withdrawn by Sheetal and Sharath.

c) Stock be reduced by 10%

d) 5% provision for doubtful debts be created on sundry debtors.

e) Land and Building be appreciated by 20%

f) An item of ₹ 1,800 included in creditors is not likely to be claimed and hence should be written back.

Prepare :

i) Revaluation a/c

ii) Partners capital accounts

iii) Balance Sheet of the new firm.

28) Anup and Sumit are equal partners in a firm. They decided to dissolve the partnership on 31.03.2019, when their Balance sheet was as under :

Balance Sheet of Anup and Sumit as on 31.03.2019

| Liabilities | | ₹ | Assets | ₹ |
|---|---|---|---|---|
| Creditors | | 30,000 | Cash at bank | 14,000 |
| Loan | | 40,000 | Sundry debtors | 12,000 |
| Reserve fund | | 10,000 | Machinery | 47,000 |
| Capitals : | | | Stock | 42,000 |
| Anup | 60,000 | | Land and Building | 60,000 |
| Sumit | 60,000 | 1,20,000 | Furniture | 25,000 |
| | | 2,00,000 | | 2,00,000 |

The Assets were realised as follows :

| | |
|---|---|
| Land and Building | ₹ 72,000 |
| Furniture | ₹ 22,500 |
| Stock | ₹ 40,500 |
| Machinery | ₹ 48,000 |
| Sundry debtors | ₹ 10,500 |

The creditors were paid ₹ 25,500 in full settlement. Expenses of realisation amounted to ₹ 2,500

Prepare :

a) Realisation account.

b) Partners capital accounts.

c) Bank account.

29) Arushi Computers Ltd., issued 10,000 equity shares of ₹ 100 each, at a premium of ₹ 10 per share, payable as follows :

On application ₹ 30

On allotment ₹ 50 (including premium)

On first and final call ₹ 30

All the shares were subscribed and the money duly received except the first and final call on 500 shares. The Directors forfeited these shares and re-issued them as fully paid at ₹ 80 per share.

Pass the necessary journal entries in the books of the company.

30) Give the journal entries for issue of debentures for the following cases in the books of Alpha Company Ltd.,

a) 10,000, 12% Debentures of ₹100 each issued at par but redeemable at premium of 5%

b) 10,000, 12% debentures of ₹100 each issued at a discount of 10% but redeemable at par.

c) 10,000, 12% debentures of ₹100 each issued at a premium of 5% but redeemable at par.

d) 10,000, 12% debentures of ₹100 each issued at par, and redeemable at par.

31) From the following information, prepare comparative Balance sheet of Adeepa Company Ltd.,

| Particulars | 31.3.2018 | 31.3.2019 |
|---|---|---|
| | ₹ | ₹ |
| I. Equity and Liabilities : | | |
| Equity share capital | 5,00,000 | 8,00,000 |
| Reserves and Surplus | 1,50,000 | 2,50,000 |
| Long term borrowings | 2,00,000 | 1,50,000 |
| Trade payables | 1,00,000 | 2,00,000 |
| Other current Liabilities | 50,000 | 1,00,000 |
| Total | 10,00,000 | 15,00,000 |
| II. Assets | | |
| Fixed assets | 3,00,000 | 5,00,000 |
| Non-current investments | 1,50,000 | 2,00,000 |
| Inventories | 2,50,000 | 3,50,000 |
| Trade receivables | 2,00,000 | 2,50,000 |
| Cash at bank | 1,00,000 | 2,00,000 |
| Total | 10,00,000 | 15,00,000 |

32) From the following particulars, calculate

a) Net assets turnover ratio

b) Fixed assets turnover ratio

c) Working capital turnover ratio

d) Gross profit ratio

e) Net profit ratio

f) Operating ratio

| Particulars | ₹ |
|---|---|
| Fixed assets | 16,00,000 |
| Current assets | 4,00,000 |
| Current liabilities | 2,00,000 |
| Revenue from operations | 20,00,000 |
| Cost of revenue from operations | 8,00,000 |
| Net profit | 4,00,000 |
| Operating expenses | 1,00,000 |

## SECTION – E

(Practical Oriented Questions)

Answer **any two** questions. Each question carries **5** marks : **(2 × 5 = 10)**

33) Classify the following into capital and revenue items.

a) Legacies

b) Purchase of computer

c) Subscription

d) Honorarium

e) Purchase of stationery.

34) Prepare Executors loan account with imaginary figures showing the repayment in two annual equal instalments along with interest.

35) Write the proforma of cash flows from operating activities under direct method.